ಸೆಲೆಬ್ರಿಟಿ ■ ಹನಿ

## ಅಮರ್‌ಸಿಂಗ್ ಅವಾಂತರ



ಉತ್ತರ ಪ್ರದೇಶದ ಅಮರ್‌ಸಿಂಗ್‌ರದ್ದು 'ರಾಜಕಾರಣಿ ಪ್ಲಸ್ ಉದ್ಯಮಿ'ಯ ದ್ವಿಪಾತ್ರ. ಆದರೆ ಇತ್ತೀಚಿನ ದಿನಗಳಲ್ಲಿ ಈ ಎರಡೂ ಪಾತ್ರಗಳನ್ನು ಕೆಡಿಸಿಕೊಂಡು ಕುಳಿತಿರುವ ಅವರ ಕುರಿತ ವಿವಾದಗಳಿಗೆ ಲೆಕ್ಕವಿಲ್ಲ. ರಾಜಕಾರಣಿಯಾಗಿ ರಾಜ್ಯಸಭೆಯ ಸದಸ್ಯರಾಗಿರುವ ಅಮರ್ ಸಿಂಗ್, ಉದ್ಯಮಿಯಾಗಿ ಯಾವ ಉದ್ಯಮಗಳನ್ನು ನಡೆಸುತ್ತಿದ್ದಾರೆ ಎನ್ನುವುದು ಸ್ಪಷ್ಟವಿಲ್ಲ! ಆದರೆ ಅವರು ನಡೆಸುವ ಭೋಜನಕೂಟಕ್ಕೆ ಭಾರೀ ಉದ್ಯಮಿಗಳು, ಪ್ರಮುಖ ರಾಜಕಾರಣಿಗಳು, ಪ್ರಖ್ಯಾತ ಚಿತ್ರನಟ– ನಟಿಯರು, ಕ್ರೀಡಾಪಟುಗಳೂ ಬಂದು ಮುತ್ತುತ್ತಾರೆ. ಹಾಗಾಗಿ ಅವರದ್ದು ವರ್ಣರಂಜಿತ ವ್ಯಕ್ತಿತ್ವವೂ ಹೌದು.

ಈಗ ಮತ್ತೆ ಅಮರ್‌ಸಿಂಗ್ (ಬರ್ತ್‌ಡೇ 27–1–1956) ಸುದ್ದಿಗೆ ಬಂದಿರುವುದು ಟೇಪ್ ಹಗರಣದಿಂದ. 2005ರಲ್ಲಿ ಅಮರಸಿಂಗ್ ದೂರವಾಣಿಯನ್ನು ಸರಕಾರ ಕದ್ದಾಲಿಸಿದೆಯಂತೆ. ಹಾಗೆ ಕದ್ದಾಲಿಸಿ, ಅಮರಸಿಂಗ್ ಚಿತ್ರನಟಿಯರ ಜತೆ, ಉದ್ಯಮಿಗಳ ಜತೆ ಮಾತನಾಡುವುದನ್ನೆಲ್ಲ ಧ್ವನಿಮುದ್ರಿಸಲಾಗಿದೆಯಂತೆ. ಹಾಗೆಂದು ಅನುಮಾನಪಟ್ಟ ಅಮರಸಿಂಗ್ ಸ್ವತಃ ಸುಪ್ರೀಂಕೋರ್ಟಿಗೆ ಅರ್ಜಿ ಸಲ್ಲಿಸಿ ಈ ಟೇಪ್ ಸಂಭಾಷಣೆಯ ಮುದ್ರಿಕೆಗಳನ್ನು ಯಾರೂ ಪ್ರಸಾರ ಅಥವಾ ಮುದ್ರಣ ಮಾಡದಂತೆ ತಡೆಯಾಜ್ಞೆ ತಂದಿದ್ದರು. ಆ ತಡೆಯಾಜ್ಞೆ ಇದೀಗ ತೆರವಾಗಿ, ಅಮರ್‌ಸಿಂಗ್ ಟೇಪ್‌ಗಳ ತುಣುಕು ಸಂಭಾಷಣೆಗಳು ಒಂದೊಂದಾಗಿ ಲೀಕ್ ಆಗುತ್ತಿವೆ. ಅದರಲ್ಲೊಂದು ಸಂಭಾಷಣೆ ಚಿತ್ರನಟಿ ಬಿಪಾಸಾ ಬಸು ಜತೆಗಿದ್ದಂತೆ. ಆ ಸಂಭಾಷಣೆಯಲ್ಲಿ ಸ್ವೀಟಿ, ಡಿಯರ್, ಸೊಂಟದ ವಿಷಯ.. ಮುಂತಾದ ಶಬ್ದಗಳೆಲ್ಲ ಇವೆಯಂತೆ! ಅಮರ್‌ಸಿಂಗ್ ಪ್ರಕಾರ ಟೇಪ್‌ನಲ್ಲಿರುವ ಧ್ವನಿ ಅವರದ್ದೇ; ಆದರೆ ಅದನ್ನು ಬೇಕಾದಂತೆ ಕತ್ತರಿಸಿ, ಎಡಿಟ್ ಮಾಡಿ ಅಂಟಿಸಲಾಗಿದೆ! ಬಿಪಾಸಾ ಪ್ರಕಾರ, ಅದರಲ್ಲಿರುವ ಧ್ವನಿ ಅವರದ್ದು ಅಲ್ಲವೇ ಅಲ್ಲ!

'ನಾನು ಸಂತನೂ ಅಲ್ಲ; ಆದರೆ ಅಷ್ಟು ಕೆಟ್ಟವನೂ ಅಲ್ಲ. ಉದ್ಯಮಿ– ರಾಜಕಾರಣಿ ಎಂದ ಮೇಲೆ ಉದ್ಯಮಕ್ಕೆ ಸಂಬಂಧಿಸಿ ರಾಜಕಾರಣಿಗಳ ಬಳಿ ಮಾತನಾಡುವುದು ಸಹಜ' ಎನ್ನುತ್ತಾರೆ ಅಮರ್‌ಸಿಂಗ್. ಸಮಾಜವಾದಿ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ಮುಲಾಯಂಸಿಂಗ್ ಜತೆ ಗಳಸ್ಯ ಕಂಠಸ್ಯ ಎಂಬಂತಿದ್ದ ಅಮರ್‌ಸಿಂಗ್ ಕಳೆದ ವರ್ಷ ಪಕ್ಷಕ್ಕೆ ರಾಜೀನಾಮೆ ಕೊಟ್ಟು ರಾಷ್ಟ್ರೀಯ ಲೋಕಮಂಚ್ ಕಟ್ಟಿಕೊಂಡಿದ್ದಾರೆ. ಆದರೆ ಆ ಬಳಿಕ ಅವರ ಸಂಕಷ್ಟಗಳು ಹೆಚ್ಚಾದಂತಿವೆ. ಸದ್ಯಕ್ಕೆ ಕಾಂಗ್ರೆಸ್ಸಿನ ಏಜೆಂಟ್ ಎಂಬಂತೆ ಅವರ ವರ್ತನೆ ಇದೆ. ಆದರೆ ಕಾಂಗ್ರೆಸ್ ಸಖ್ಯ ಅವರನ್ನು ವಿವಾದಗಳಿಂದ ಬಚಾವ್ ಮಾಡುವಂತೆ ಕಾಣುತ್ತಿಲ್ಲ.

ಕೋಲ್ಕತ್ತಾದ ಸೈಂಟ್ ಕ್ಸೇವಿಯರ್ ವಿದ್ಯಾರ್ಥಿಯಾಗಿದ್ದ, ಚತುರ ಮಾತುಗಾರ ಅಮರ್‌ಸಿಂಗ್ ಸದ್ಯಕ್ಕೆ ಭ್ರಷ್ಟಾಚಾರದಿಂದ ಕಂಗೆಟ್ಟಿರುವ ಭಾರತೀಯ ರಾಜಕಾರಣ ಮತ್ತು ಉದ್ಯಮರಂಗದ ಮಾಲಿನ್ಯದ ಸಂಕೇತದಂತೆ ಕಂಗೊಳಿಸುತ್ತಿರುವುದು ವಿಚಿತ್ರವಾದರೂ ಸತ್ಯ.



## ಅಜ್ಜನ ಬರವಣಿಗೆ

ಜೆಫ್ರಿ ಹೊವಾರ್ಡ್ ಆರ್ಚರ್ ಹುಟ್ಟಿದಾಗ ಆತನ ಅಪ್ಪನಿಗೆ 64 ವರ್ಷಗಳಾಗಿತ್ತಂತೆ! ಅಪ್ಪ ಮುದ್ದಿನಿಂದ ಬೆಳೆಸಿದ್ದರಿಂದಲೋ ಏನೋ, ಜೆಫ್ರಿ ತನಗಿಷ್ಟ ಬಂದಂತೆ ಬೆಳೆದರು. ಲಂಡನ್ನಿನ ಹೆಸರುವಾಸಿ ಕಾದಂಬರಿಕಾರ ಮತ್ತು ಸಂಸದ ಎರಡೂ ಆಗಿರುವ ಜೆಫ್ರಿ, ಇವತ್ತಿಗೂ ಯಾರ ಒತ್ತಡಕ್ಕೂ ಬಗ್ಗದೆ, ಮುಲಾಜಿಗೂ ಒಳಗಾಗದೆ ಬರೆಯುತ್ತಿರುವಾತ, ಬದುಕುತ್ತಿರುವಾತ. ಇದೀಗ 71ರ ಇಳಿವಯಸ್ಸಿನಲ್ಲಿ (ಬರ್ತ್‌ಡೇ 15–4–1940) ಐದು ಕಾದಂಬರಿಗಳ ಒಂದು ಗೊಂಚಲನ್ನು ಓದುಗರ ಮುಂದಿಡಲು ಹೊರಟು ಮತ್ತೆ ಸುದ್ದಿಯಾಗಿದ್ದಾರೆ. ಆ ಐದು ಕಾದಂಬರಿಗಳ ಸರಣಿಯಲ್ಲಿ ಮೊದಲ ಕಂತು ಮೊನ್ನೆ ಬಿಡುಗಡೆಯಾಗಿದೆ. 'ದಿ ಕ್ಲಿಫ್ಟನ್ ಕ್ರಾನಿಕಲ್ಸ್' ಎಂಬ ಈ ಬೃಹತ್ ಕಾದಂಬರಿಯ ಕಥೆ 20ನೇ ಶತಮಾನದಲ್ಲಿ ಆರಂಭವಾಗಿ 21ನೇ ಶತಮಾನದಲ್ಲಿ ಮುಕ್ತಾಯವಾಗುತ್ತದಂತೆ. ಅಂದರೆ ಕ್ಲಿಫ್ಟನ್ ಎಂಬ ಶ್ರೀಮಂತನ ಮನೆತನದ ಬಗ್ಗೆ 1920ರಿಂದ ಶುರುವಾಗಿರುವ ಕಥೆ 2020ರವರೆಗೂ ಮುಂದುವರಿಯಲಿದೆಯಂತೆ!

ಜೆಫ್ರಿಯಜ್ಜನ 'ನಾಟ್ ಎ ಪೆನ್ನಿ ಮೋರ್, ನಾಟ್ ಎ ಪೆನ್ನಿ ಲೆಸ್' ಎನ್ನುವ ಮೊದಲ ಕಾದಂಬರಿ ಸೂಪರ್ ಹಿಟ್ ಆದದ್ದು 40 ವರ್ಷಗಳ ಹಿಂದೆ. 1969ರಲ್ಲಿ 29ರ ಹರೆಯಕ್ಕೇ ಮೊದಲ ಬಾರಿಗೆ ಬ್ರಿಟನ್ ಸಂಸತ್ತಿನ ಸದಸ್ಯರಾದ ಜೆಫ್ರಿ, ಆ ಬಳಿಕ ರಾಜಕೀಯದ ಜತೆಗೆ ಹಗರಣಗಳಲ್ಲೂ ಸುದ್ದಿ ಮಾಡಿದರು. ವೇಶ್ಯೆಯೊಬ್ಬಳ ಜತೆಗಿದ್ದೆನೆಂದು ತನ್ನ ಬಗ್ಗೆ ಸಲ್ಲದ್ದನ್ನು ಬರೆದ ಪತ್ರಿಕೆಯೊಂದರ ಬೆನ್ನುಹತ್ತಿ ಕೋರ್ಟ್ ಮೆಟ್ಟಿಲು ಹತ್ತಿ ಹೋರಾಡಿ ಗೆದ್ದ ಜೆಫ್ರಿ ಆಬಳಿಕ ಕೋರ್ಟಿನಲ್ಲಿ ಸುಳ್ಳು ಸಾಕ್ಷ್ಯ ನೀಡಿದ್ದಕ್ಕೆ ಜೈಲು ಸೇರಿದ್ದೂ ನಡೆಯಿತು. ಕನ್ಸರ್ವೇಟಿವ್ ಪಕ್ಷದ ಈ ಸದಸ್ಯ ಮಾರ್ಗರೆಟ್ ಥ್ಯಾಚರ್ ಪ್ರಧಾನಿಯಾಗಿದ್ದಾಗ ಅತ್ಯಂತ ಪವರ್‌ಫುಲ್ ಸಂಸದ. ಕಾದಂಬರಿಗಳು ಟಿ.ವಿ ಸರಣಿಗಳಾಗಿಯೂ ಇಂಗ್ಲಿಷರ ಮನ ಗೆದ್ದವು. 'ಫರ್ಸ್ಟ್ ಅಮಂಗ್ ಈಕ್ವೆಲ್ಸ್'ನಂತಹ ರಾಜಕೀಯ ಕಥನಗಳೂ ಜೆಫ್ರಿಗೆ ಬೆಸ್ಟ್ ಸೆಲ್ಲರ್ ಕೀರ್ತಿ ತಂದುಕೊಟ್ಟವು. ಈಗ ಇಳಿವಯಸ್ಸಿನಲ್ಲಿ ಐದು ಮಹಾಕಾದಂಬರಿಗಳನ್ನು ಬರೆಯಲು ಕುಳಿತಿರುವ ಈ ಅಜ್ಜನ ಸಾಹಿತ್ಯಕ ಮನೋಬಲ ಮೆಚ್ಚಬೇಕಾದದ್ದೇ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65